# ನೀನು, ಬೆಳೆದು ಏನಾಗಬೇಕೆಂದಿರುವಿ?

## ಮತ್ತಾಯ 20:17-28; ಮಾರ್ಕ 10:32-45; ಲೂಕ 18:31-34, ಒಂದು ನಿಕಟ ನೋಟ

ನನ್ನ ತಂದೆಯಾದ ಡೇವಿಡ್ ರೋಪರ್‌ರವರು, ಶಿಕ್ಷಣ ತಜ್ಞರಾಗಿದ್ದರು: ಅವರು ವ್ಯವಸಾಯದ, ವಿಜ್ಞಾನದ, ಬೋಧಕರು ಹಾಗೂ ಪ್ರಾಂಶುಪಾಲಕರೂ ಆಗಿದ್ದರು. ಅವರು ಗ್ರಂಥಾಲಯದ ಯಜಮಾನ, ವ್ಯವಸಾಯಗಾರ, ಒಬ್ಬ ಮಿಶನರಿ ಹಾಗೂ ಪ್ರಸಂಗಿಯೂ ಆಗಿದ್ದರು. ಈಗ ಅವರ 88ನೇ, ಪ್ರಾಯದಲ್ಲಿ ಒಂದು ಸುದ್ದಿ ಮಾಧ್ಯಮದಲ್ಲಿ ತಮಾಷೆಯ ಪುಟವನ್ನು ಬರೆಯುತ್ತಿದ್ದರು. ಆದ್ದರಿಂದ ನಮ್ಮ ಕುಟುಂಬದಲ್ಲಿ ಅವರನ್ನು ಕುರಿತು, "ನೀನು ಬೆಳೆದು ಏನಾಗಬೇಕೆಂದಿರುವಿ?" ಎಂದು ಹಂಗಿಸುತ್ತಿದ್ದೆವು.

ಒಂದು ಮಗುವಿನ ಬಳಿ "ನೀನು ಬೆಳೆದು ಏನಾಗಬೇಕೆಂದಿರುವಿ? ಎಂದು ಪ್ರಶ್ನಿಸುವದಾದರೆ, ಪ್ರಾಯಶಃ ನಾನು ಫೈರ್‌ಮ್ಯಾನ್ ಶಿಕ್ಷಕ ಖಗೋಳ ಶಾಸ್ತ್ರಜ್ಞ, "ನೃತ್ಯ ಮಾಡುವವ" "ವೈದ್ಯ" ನರ್ಸ್,[1] ಎಂದು ಉತ್ತರಿಬಹುದು. ನಿಮಗೆ ನಾನು ಈ ಪ್ರಶ್ನೆಯನ್ನೇ ಕೇಳುತ್ತೇನೆ. ನೀವು ಬೆಳೆದು ಏನಾಗಬೇಕೆಂದಿದ್ದೀರಿ? ಆದರೆ ಇಲ್ಲಿ ನಾನು ನೀವುಗಳು ದೈಹೀಕವಾಗಿ ಬೆಳೆದ ನಂತರದ ಸಂಗತಿಯನ್ನು ಕೇಳುತ್ತಿರುವದಿಲ್ಲ. ಈಗಾಗಲೇ ನೀವು ಯೋಗ್ಯವಾದ ಕೆಲಸದಲ್ಲಿದ್ದೀರಿ. ನಿಮ್ಮ "ಆತ್ಮೀಕ ಜೀವಿತದಲ್ಲಿ ಏನಾಗಬೇಕೆಂದಿದ್ದೀರಿ" ಎಂಬುದು ನನ್ನ ಪ್ರಶ್ನೆಯಾಗಿದೆ.[2] ನಿನ್ನ ಆತ್ಮೀಕ ಅಭಿಲಾಷೆಗಳೇನು? ದೇವರ ರಾಜ್ಯದಲ್ಲಿ ಏನಾಗ ಬಯಸಿದ್ದಿರಿ?

ಒಂದು ದಿವಸ ಯೇಸು ತಮ್ಮ ಶಿಷ್ಯರೊಂದಿಗೆ ಈ ಕುರಿತು ಗಂಭೀರ ಚರ್ಚೆಯನ್ನು ಮಾಡಿದನು, ಆತನು ಹೇಳಿದ ಮಾತುಗಳನ್ನು ಆಲೋಚಿಸಬೇಕು.

### ಎರಡು ಜನ ಶಿಷ್ಯರು

### (ಮತ್ತಾಯ 20:17-23; ಮಾರ್ಕ 10:32-40; ಲೂಕ 18:31-34)

ಕರ್ತನು ತನ್ನ ಮರಣಕ್ಕಾಗಿ ಹೊರಟಿದ್ದನು. ಆಗ ತನ್ನ ಶಿಷ್ಯರನ್ನು ಸೇರಿಸಿ ಅವರೊಂದಿಗೆ,

> "ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕರೆದು ಕೊಂಡು ಅವರಿಗೆ - ನೋಡಿರಿ, ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ; ಮತ್ತು ಮನುಷ್ಯಕುಮಾರನ ವಿಷಯದಲ್ಲಿ ಪ್ರವಾದಿಗಳು ಬರೆದದ್ದೆಲ್ಲಾ ಅವನಲ್ಲಿ ನೆರವೇರುವದು. ಹೇಗಂದರೆ - ಅವನನ್ನು ಅನ್ಯರ ಕೈಗೆ ಒಪ್ಪಿಸುವರು, ಇವರು ಅವನನ್ನು ಅಪಹಾಸ್ಯ ಮಾಡುವರು, ಬೈಯುವರು, ಉಗುಳುವರು, ಅಪಹಾಸ್ಯ ಮಾಡುವರು, ಬೈಯುವರು, ಉಗುಳುವರು, ಕೊರಡೆಗಳಿಂದ ಹೊಡೆಯುವರು, ಕೊಂದುಹಾಕುವರು; ಮತ್ತು ಮೂರನೆಯ ದಿನದಲ್ಲಿ ಅವನು ಜೀವಿತ ನಾಗಿ ಎದ್ದು ಬರುವನು ಎಂದು ಹೇಳಿದನು" (ಲೂಕ 18:31-33).

ಲೂಕ 18:34ಎ ಪ್ರಕಾರ, "ಅವರು ಈ ಸಂಗತಿಗಳಲ್ಲಿ ಒಂದನ್ನಾದರೂ ಗ್ರಹಿಸಲಿಲ್ಲ." ಯಾಕಂದರೆ ಕ್ರಿಸ್ತನು ಯೆರೂಸಲೇಮಿಗೆ ಹೋಗಿ, ದೈಹೀಕವಾದ ರಾಜ್ಯವನ್ನು ಸ್ಥಾಪಿಸುವನೆಂದು ತಿಳಿದಿದ್ದರು (ನೋಡಿ ಲೂಕ 19:11). ಕ್ರೂಜಿಯು ಅವರ ಆಲೋಚನೆಯಲ್ಲಿರಲಿಲ್ಲ.

**ಸ್ವ-ಆಸಕ್ತಿ**

ಅವರ ಅಪಾರ್ಥವು ಬೇಗನೆ ಬಯಲಾಗುವ ಸಾಧ್ಯತೆಯಿತ್ತು. “ಯಾಕೋಬ ಯೋಹಾನರು ಆತನ ಬಳಿಗೆ ಬಂದು ಆತನಿಗೆ ಗುರುವೇ, ನಾವು ಒಂದನ್ನು ಕೇಳಿಕೊಳ್ಳುತ್ತೇವೆ; ಅದನ್ನು ನಮಗೋಸ್ಕರ ನಡಿಸಿಕೊಡಬೇಕೆಂದು ಕೇಳಿದರು” (ಮಾರ್ಕ 10:35). ಕ್ರಿಸ್ತನು ಅವರಿಗೆ ಪ್ರತಿಕ್ರಿಯೆ ನೀಡಬೇಕೆಂದು ಬಯಸಿದರು. ಕೆಲವರು ಒಂದು ಕಾರಣವನ್ನು ಹೇಳದೆ, ನೀನು ಈ ಕಾರ್ಯಮಾಡಿದರೆ ನಾವು ಏನನ್ನಾದರೂ ನಿನಗೆ ನೀಡುತ್ತೇವೆ ಎಂದು ಹೇಳಬಹುದು.[3]

> ಮನವಿ: “ದೇವ್ ನನ್ನ ಒಂದು ಕೆಲಸವನ್ನು ಮಾಡಿಕೊಡುವೆಯಾ?”
> *ಎಚ್ಚರಿಕೆಯಿಂದ ಉತ್ತರ: “ಹಾ ... ಏನದು?’*

ಯೇಸು ಆ ಇಬ್ಬರಿಗೆ, “ನಿಮಗೇನು ನಡಿಸಿಕೊಡಬೇಕೆಂದು?” ಕೇಳಿದನು (ಮಾರ್ಕ 10:36). ಅವರ ಕೊರತೆ ಏನೆಂದು ಆತನು ತಿಳಿದಿದ್ದರೂ, ಅವರಲ್ಲಿದ್ದ ಸ್ವಾರ್ಥವನ್ನು ಹೊರತರಲು ಪ್ರಯತ್ನಿಸಿದನು (ಯೋಹಾನ 6:6 ಹೋಲಿಸಿ). ಅವರು ಆತನಿಗೆ, “ನಿನಗೆ ಮಹಾಪದವಿ ಬಂದಾಗ ನಮ್ಮಲ್ಲಿ ಒಬ್ಬನು, ನಿನ್ನ ಬಲಗಡೆಯಲ್ಲೂ, ಮತ್ತೊಬ್ಬನು ಎಡಗಡೆಯಲ್ಲೂ ಕೂತುಕೊಳ್ಳುವಂತೆ ನಮಗೆ ಅನುಗ್ರಹ ಮಾಡಬೇಕೆ ಅಂದರು” (ನೋಡಿ ಮಾರ್ಕ 10:37; ಮತ್ತಾಯ 20:21).

ಅಪೊಸ್ತಲರು ದೇವರ ರಾಜ್ಯದ ಸಿಂಹಾಸನದಲ್ಲಿ ಕುಳಿತುಕೊಳ್ಳುವರು ಎಂದು ಹೇಳಿ ಕೆಲವೇ ಕ್ಷಣಗಳಲ್ಲಿ ಕಳೆದಿದ್ದವು (ಮತ್ತಾಯ 19:28).[4] ಈಗ ಯಾಕೋಬ, ಯೋಹಾನರು ಸಿಂಹಾಸನದ ಪ್ರಮುಖ ಸ್ಥಳವನ್ನು ನೀಡಬೇಕೆಂದು ಕೇಳಿಕೊಂಡರು. ಯೇಸುವಿನ ಎಡ ಮತ್ತು ಬಲಭಾಗದ ಸಿಂಹಾಸನದಲ್ಲಿ ಕೂರುವದು ಅತಿ ಶ್ರೇಷ್ಟ ಎಂದು ಅವರು ಬಯಸಿದ್ದರು.[5] ಅಮೇರಿಕೆಯ ಪ್ರಕಾರ, ಒಬ್ಬನು ದೇಶದ ಖಜಾಂಚಿ,[6] ಮತ್ತೊಬ್ಬನು ಸೆಕ್ರೆಟರಿ ಎಂಬ ಅರ್ಥ ಇಂಗ್ಲೆಂಡಿನ ಪ್ರಕಾರ ಒಬ್ಬನು ಪ್ರಧಾನಿ, ಮತ್ತೊಬ್ಬನು ಹಣಕಾಸಿನ ಮಂತ್ರಿ.[7]

ಅವರು ಈ ರೀತಿ ಏಕೆ ಬಯಸಿದರೆಂದು ನಾವುಗಳು ಅರಿಯೆವು. ಒಂದು ವೇಳೆ ಅವರು, ತಾವುಗಳೇ ಅದಕ್ಕೆ ಅರ್ಹರಾದವರು ಎಂದು ಬಯಸಿರಬಹುದು. ಯಾಕಂದರೆ ಅವರಲ್ಲಿ ಹಣವಿತ್ತು (ಮಾರ್ಕ 1:20). ಹಾಗೂ ಅವರು ಮಹಾಯಾಜಕರ ಸಂಸರ್ಗದಲ್ಲಿದ್ದರು (ಯೋಹಾನ 18:25). ಕ್ರಿಸ್ತನ ಅತಿ ಸಮೀಪಸ್ತರಾದ ಮೂವರಲ್ಲಿ, ಇವರು ಪ್ರಮುಖರು ಎಂದು ತಿಳಿದಿರಬಹುದು (ಮತ್ತಾಯ 17:1). ಅವರು ಯೇಸುವಿನ ಸಂಬಂಧಿಕರಾದ್ದರಿಂದ ಯೇಸು ಭಿನ್ನಭಾವ ಮಾಡಬಹುದೆಂದು ತಿಳಿದಿರಬಹುದು. ಹೇಗೂ ಕ್ರಿಸ್ತನು ಕ್ರೂಜಿಯ ಬಗ್ಗೆ ಯೋಚಿಸಿ ದರೆ, ಇವರು ಕಿರೀಟದ ಬಗ್ಗೆ ಚಿಂತಿಸುತ್ತಿದ್ದರು.

ಡೇಲ್‌ಹಾರ್ಟ್‌ಮನ್‌ರವರು ಶಿಷ್ಯರ ಈ ಸ್ವಭಾವದ ಕುರಿತಾಗಿ, ತಮ್ಮ ಯೌವ್ವನ ಕಾಲದ ಅನುಭವವನ್ನು ತಿಳಿಸಿದ್ದಾರೆ. ಕರೆಯನ್ನು ಶುಚಿ ಮಾಡುವ ಸಲುವಾಗಿ ಅದರ ಮಣ್ಣನ್ನು ತೆಗೆಯಬೇಕಿತ್ತು. ಆದರೆ ಇದನ್ನು ಮಾಡುವ ಮೊದಲು ಆ ನೀರಿನಲ್ಲಿದ್ದ ಮೀನು ಗಳನ್ನು ಹಿಡಿದು ಕಾಪಾಡಬೇಕಿತ್ತು; ಡೇಲ್ ಮತ್ತು ಆತನ ಸ್ನೇಹಿತನು ಒಂದು ಉದ್ದವಾದ ಬಲೆಯನ್ನು ಬಿಸಿ ಅದನ್ನು ಅಡ್ಡವಾಗಿ ಎಳೆದರು. ಆಗ ಆ ಬಲೆಯು ಬಹುಭಾರವಾದ್ದರಿಂದ ಡೇಲ್‌ರವರು ಅದನ್ನು ಎಳೆಯುವದು ಬರು ಕಷ್ಟವಾಯಿತು. ಅದು ಮೀನುಗಳಿಂದ ತುಂಬಿತು! ಅವರು ಮುಂದುವರೆದು ಆ ಬಲೆಯನ್ನು ಕೆರೆಯ ಇನ್ನೊಂದು ಬದಿಗೆ ಎಳೆದಾಗ, ಅದರಲ್ಲಿ ಕೆಲವು ಮೀನುಗಳ ಹೊರತಾಗಿ ಅನೇಕ ಚಿಕ್ಕ ಆಮೆಗಳಿಂದ ಆ ಬಲೆಯು ತುಂಬಿತು, ಆ ಆಮೆಗಳು ಕಷ್ಟಪಟ್ಟು ಈಜಿ ಆಳವಾದ ನೀರಿನೊಳಗೆ ಹೋಗಲು ಪ್ರಯತ್ನಿಸುತ್ತಿದ್ದವು. ಆಗ ಡೇಲ್‌ರವರು, “ಯೇಸು ಕ್ರೂಜೆಯನ್ನು ಸಮೀಪಿಸುವಾಗ, ಹನ್ನೆರಡು ಆಮೆಗಳು, ವಿರುದ್ಧ ದಿಕ್ಕಿನಲ್ಲಿ ಚಲಿಸಿದವು” ಎಂದು ಹೇಳಿದರು.[8]

ಯೇಸುವಿನ ಸಂಗಡ ಯಾಕೋಬ ಹಾಗೂ ಯೋಹಾನನ ತಾಯಿಯಾದ ಸಲೋಮಿಯು ಸಹ ಪ್ರಯಾಣ ಮಾಡಿದಳು (ಮತ್ತಾಯ 20:20; ಮತ್ತಾಯ 27:55, 56; ಮಾರ್ಕ 15:40, 41). ಆಕೆಯು ತನ್ನ ಮಕ್ಕಳೊಂದಿಗೆ ಯೇಸುವಿನ ಬಳಿಗೆ ಬಂದು, "ನನ್ನ ಈ ಇಬ್ಬರು ಮಕ್ಕಳಲ್ಲಿ ಒಬ್ಬನು ನಿನ್ನ ಬಲಗಡೆಯಲ್ಲೂ, ಮತ್ತೊಬ್ಬನು ಎಡಗಡೆಯಲ್ಲೂ ಕೂತುಕೊಳ್ಳುವದಕ್ಕೆ ಅಪ್ಪಣೆಯಾಗಬೇಕು ಅಂದಳು" (ಮತ್ತಾಯ 20:21).[9]

ಜೆಬೆದಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ನನ್ನ ತಾಯಿಗೆ ಇಬ್ಬರು ಮಕ್ಕಳು, ಆಕೆ ಅವರಿಗಾಗಿ ನ್ಯಾಯವಾದ, ನೈತಿಕವಾದ, ಹಾಗೂ ಯೋಗ್ಯವಾದ ಸಂಗತಿಗಳನ್ನು ಮಾಡಲು ಸಿದ್ಧಳಿದ್ದಾಳೆ. ನನ್ನ ದೇಶದ ಅಧ್ಯಕ್ಷರ ಬಳಿಗೆ ಆಕೆಯು ಹೋಗಿ, "ಅಧ್ಯಕ್ಷರೇ, ನನ್ನದೊಂದು ಮನವಿ ಇದೆ; ನನ್ನ ಈ ಇಬ್ಬರು ಮಕ್ಕಳಿಗೆ ... ."

ಕ್ರಿಸ್ತನು ಸಲೋಮಿಯನ್ನು ತಿರಸ್ಕರಿಸಲಿಲ್ಲ. ಆಕೆಯು ತನ್ನ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿವುಳ್ಳದ್ದರಿಂದ, ಅವರಿಗೆ ಉತ್ತಮವಾದದ್ದನ್ನೇ ಬಯಸಿದಳು. ಅವಳು ಆ ರಾಜ್ಯವು ಆತ್ಮೀಕವೆಂದು ತಿಳಿಯದೆ, ದೈಹೀಕವಾದದ್ದು ಎಂದು ತಿಳಿದಿದ್ದಳು. ಅದನ್ನು ನಾವು ಅರ್ಥ ಮಾಡಿಕೊಳ್ಳಬಹುದಾಗಿದೆ.[10] ಹೇಗೂ ಆಕೆಯ ಮಕ್ಕಳಿಗೆ ಬೇರೆ ದಾರಿ ಇರಲಿಲ್ಲ. ಮೂರು ವರ್ಷಗಳ ಕಾಲ ರಾತ್ರಿ ಹಗಲು ಯೇಸುವಿನ ವಾಕ್ಯ ಕೇಳುವ ಅವಕಾಶ ಹೊಂದಿದ್ದರು. ಈಗಾಗಲೆ ಅವರು ಆ ರಾಜ್ಯದ ಸ್ವಭಾವವನ್ನು ಅರಿಯಬೇಕಿತ್ತು. ಯಾಕೋಬ, ಯೋಹಾನರ ಈ ಮನವಿಯನ್ನು ಯೇಸು ನಿರಾಕರಿಸಿದ್ದನು (ನೋಡಿ ಮತ್ತಾಯ 20:22; ಮಾರ್ಕ 10:38).[11]

**ಸ್ವಾರ್ಥ-ನಿರಾಕರಣೆ**

ಮೊದಲನೆಯದಾಗಿ ಕ್ರಿಸ್ತನು ಅವರಿಗೆ, "ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು" ಅಂದನು (ಮಾರ್ಕ 10:38ಎ). ಈ ಮಾತಿನಿಂದ ಅವರು ಆಶ್ಚರ್ಯಪಟ್ಟಿರಬಹುದು. ಅವರು ಪ್ರಜ್ಞಾಪೂರ್ವಕವಾಗಿ: ಬಲ ಮತ್ತು ಅಧಿಕಾರವನ್ನು, ಗೌರವ ಹಾಗೂ ಮಾನ್ಯತೆಯನ್ನು ಕೇಳಿರಬಹುದು.

ಯೇಸುವಿನ ಮಾತಿನಿಂದ ಅವರು ಆಶ್ಚರ್ಯ ಚಕಿತರಾಗಿದ್ದರೆ, ಮುಂದಿನ ಪ್ರಶ್ನೆ ಹೆಚ್ಚು ಆಶ್ಚರ್ಯಉಂಟು ಮಾಡಿರಬಹುದು. ನಂತರ ಆತನು: "ನಾನು ಕುಡಿಯುವ ಪಾತ್ರೆಯಲ್ಲಿ ಕುದಿಯುವದು ನಿಮ್ಮಿಂದಾದೀತೆ? ನನಗಾಗುವ ದೀಕ್ಷಾಸ್ನಾನವನ್ನು ಹೊಂದುವದು ನಿಮ್ಮಿಂದಾದೀತೆ?" (ಮಾರ್ಕ 10:38ಬಿ). ಅಧಿಕವಾದ ಆನಂದಕ್ಕೆ ಹಾಗೂ ವೇದನೆಗೆ ಹಳೆಯ[12] ಒಡಂಬಡಿಕೆಯಲ್ಲಿ, ಪಾತ್ರೆಯು ಸಂಕೇತವಾಗಿತ್ತು (ಕೀರ್ತನೆ 23:5; ಯೆಶಾಯ 51:17). ಇಲ್ಲಿ ಕ್ರಿಸ್ತನ ಭಾದೆಗಳಿಗೆ ಸಂಕೇತವಾಗಿದೆ. "ದೀಕ್ಷಾಸ್ನಾನ" ಅಂದರೆ "ಮುಳುಗಿಸು" ಅಂದರೆ ಅತಿ ಆನಂದ.[13] ಕ್ರೂಜಿಯ ವೇದನೆಯ ಮಾತುಗಳು ಯೇಸುವಿನಿಂದ ಹೊರ ಹೊಮ್ಮಿದ್ದವು. ಮುಂದೆ ಉಂಟಾಗಬಹುದಾದ ವೇದನೆಯನ್ನು "ಪಾತ್ರೆ" ಎಂದು ವರ್ತಮಾನದಲ್ಲಿ ಮಾತಾಡಿದನು. ನಾನು ಕುಡಿಯುವೆನು ಹಾಗೂ ದೀಕ್ಷಾಸ್ನಾನ ಮಾಡಿಸಿಕೊಳ್ಳುವೆನು. ಮುಂದೆ ಆಗಲಿದ ಭಾದೆಗಳ ಸೂಚನೆ ಯಾಕೆಂದರೆ ಆತನು ಈಗಾಗಲೇ ವೇದನೆಗೊಳಗಾಗಿದ್ದನು (ನೋಡಿ ಲೂಕ 12:50).

ಯೇಸುವಿಗೆ ರೋಮಾಯರು ನೀಡಲಿದ್ದ ಸೈನ್ಯದ ಪದ್ಧತಿಯ ಪ್ರಕಾರದ ಹಿಂದೆಯನ್ನು ಯಾಕೋಬ ಮತ್ತು ಯೋಹಾನರು ಊಹಿಸಿರಬಹುದು.[14] ಅದನ್ನು ಅವರು ಎದುರಿಸಲು ಸಮರ್ಥರಾಗಿದ್ದರು.[15] ಅವರು ತಮ್ಮ ಮುಗ್ದತೆಯಲ್ಲಿದ್ದ ಧೈರ್ಯವನ್ನು ಪ್ರಕಟಿಸಿದ್ದರು ಆದ್ದರಿಂದ ಅವರು ಆಗುವದು ಅಂದರು (ಮಾರ್ಕ 10:39ಎ).[16]

ಯೇಸು ದುಃಖದಿಂದ ಉತ್ತರಿಸಿರಬಹುದು, ನಾನು ಕುಡಿಯುವ ಪಾತ್ರೆಯಲ್ಲಿ ಕುಡಿಯುವಿರಿ, ನನಗಾಗುವ ಸ್ನಾನವು ನಿಮಗಾಗುವದು; (ಮಾರ್ಕ 10:39ಬಿ). ಮುಂದೆ ಆ

ಇಬ್ಬರು ಅನುಭವಿಸಲಿಕ್ಕಿದ್ದ ವೇದನೆಗಳನ್ನು ಯೇಸು ಅರಿತ್ತಿದ್ದನು: ಅಗ್ರಿಪ್ಪನು ಯಾಕೋಬನನ್ನು ಕೊಲ್ಲುವದಕ್ಕಿದ್ದನು. ಕ್ರಿ.ಶ. 44 (ಅಪೊಸ್ತಲರ ಕೃತ್ಯಗಳು 12:2), ಯೋಹಾನನು ಪತ್ಮೋಸ್ ದ್ವೀಪಕ್ಕೆ ಸೆರೆಯಾಗಿ ಹೋಗಲಿದ್ದನು (ಪ್ರಕಟನೆ 1:9).

ಯೇಸು ಅವರ ಮನವಿಗೆ ಸ್ಪಂದಿಸಿ: "... ಆದರೆ ನನ್ನ ಬಲಗಡೆಯಲ್ಲಾದರೂ ಎಡಗಡೆಯಲ್ಲಾದರೂ ಕೂತುಕೊಳ್ಳುವಂತೆ ಮಾಡುವದು ನನ್ನದಲ್ಲ. ಅದು ಯಾರಿಗೆಂದು ಸಿದ್ಧಪಡಿಸಿದೆಯೋ ಅವರಿಗೆ ಸಿಕ್ಕುವದು ಎಂದು ಹೇಳಿದನು (ಮತ್ತಾಯ 20:23). ಇಂಥಹ ಮಹಾಸ್ಥಾನವನ್ನು ನೀಡುವದು ತಂದೆಗೆ ಸಂಬಂಧಪಟ್ಟ ಸಂಗತಿಯೆಂದು ಯೇಸು ತಿಳಿದಿದ್ದನು ಏಕೆಂದರೆ ಆತನು ತಾನೇ ಈ ಉದ್ದೇಶದಿಂದ ಈ ಭೂಮಿಗೆ ಬಂದಿದ್ದನು (ನೋಡಿ ಫಿಲಿಪ್ಪಿ 2:6, 7).[17] ದೇವರು ಅದನ್ನು ನಿರ್ಧರಿಸುತ್ತಾನೆ. ಎಂದಿರದೆ, ಕೆಲವು ವಿಧವಾದ ವ್ಯಕ್ತಿಗಳಿಗೆ ಮುಖ್ಯವಾಗಿ ಸೇವೆ ಮಾಡುವವರಿಗೆ ಮಾತ್ರ ಅದು ಮೀಸಲು ಎಂಬುದು ಸ್ಪಷ್ಟವಾಗಿದೆ (ಮತ್ತಾಯ 20:26, 27).[18] ಹೇಗೂ, ನಾವು ಕಥೆಯನ್ನು ಮುಂದುವರೆಸೋಣ.

## ಹನ್ನೆರಡು ಜನ ಶಿಷ್ಯರು
## (ಮತ್ತಾಯ 20:24-28; ಮಾರ್ಕ 10:41-45)

### ಸ್ವ-ಆಸಕ್ತಿ

ಯಾಕೋಬ ಮತ್ತು ಯೋಹಾನರು ತಮ್ಮ ಸಂಭಾಷಣೆ ಯೇಸುವಿಗೆ ಮಾತ್ರ ತಿಳಿದಿತ್ತು ಎಂದು ನೆನಸಿದ್ದರೆ, ರಹಸ್ಯವಾಗಿ ಮಾತನಾಡುವ ಸಂಗತಿಗಳು ಬಯಲಾಗುತ್ತದೆ ಎಂಬುದನ್ನು ಮರೆಯಬಾರದು, ಇವರ ಮಾತುಗಳನ್ನು ಗ್ರಹಿಸಿದ ಇತರೆ ಅಪೊಸ್ತಲರು "ಆ ಅಣ್ಣತಮ್ಮಂದಿರ ಮೇಲೆ ಸಿಟ್ಟುಗೊಂಡರು" (ಮತ್ತಾಯ 20:24). ದೇವರ ರಾಜ್ಯದಲ್ಲಿ ಯಾರು ಶ್ರೇಷ್ಠರು ಎಂಬ ತರ್ಕವು ಅವರಲ್ಲಿ ಮುಂದುವರೆದಿತ್ತು (ನೋಡಿ ಮಾರ್ಕ 9:34; ಮತ್ತಾಯ 18:1; ಲೂಕ 22:24).

### ಸ್ವ-ನಿರಾಕರಣೆ

ಯೇಸು ಅವರನ್ನು ಹತ್ತಿರಕ್ಕೆ ಕರೆದು, "ಅವರಿಗೆ, ಜನಗಳನ್ನಾಳುವವರು ಅವರ ಮೇಲೆ ಅಹಂಕಾರದಿಂದ ದೊರೆತನ ಮಾಡುತ್ತಾರೆ, ಮತ್ತು ದೊಡ್ಡವರು ಬಲತ್ಕಾರದಿಂದ ಅಧಿಕಾರ ನಡಿಸುತ್ತಾರೆ ಎಂದು ನೀವು ಬಲ್ಲಿರಷ್ಟೆ" (ಮತ್ತಾಯ 20:25). ಲೋಕವು ಈ ರೀತಿ ಅದೇ ಲೋಕದ ಅಧಿಕಾರವು ಸಂಸ್ಥೆಯ ಮುಖ್ಯಸ್ಥನಿಂದ ಆರಂಭಗೊಂಡು, ಅತಿ ಸಣ್ಣ ನೌಕರರವರೆಗೆ ಹರಿಯುತ್ತದೆ. ಸಮಾಜದ ಪ್ರಮುಖರು ಮಾತ್ರ ಅಧಿಕಾರ ಚಲಾಯಿಸುತ್ತಾರೆ. ಚಕ್ರವರ್ತಿಯು, ಸೈನ್ಯವನ್ನು ಹೊಂದಿರುತ್ತಿದ್ದನು. ರೋಮಾಯದ ಅಧಿಕಾರಿಯು ತನ್ನ ಕಛೇರಿಯನ್ನು, ಐಶ್ವರ್ಯವಂಥರು ದಾಸರನ್ನು ಹೊಂದಿರುತ್ತಿದ್ದರು. ಒಬ್ಬನ ಅಧಿಕಾರದ ಕೆಳಗೆ ಇರುವ ಜನರನ್ನು ಅಧಿಕಾರವು ಅವಲಂಭಿಸಿರುತ್ತದೆ. ಕ್ರಿಸ್ತನು ತನ್ನ ಶಿಷ್ಯರಿಗೆ, "ನಿಮ್ಮಲ್ಲಿ ಹಾಗಿರಬಾರದು" (ಮತ್ತಾಯ 20:26ಎ).

"ನಿಮ್ಮಲ್ಲಿ ಹಾಗಿರಬಾರದು," ಅಂದರೆ ಸಭೆ/ದೇವರ ರಾಜ್ಯಕ್ಕೆ ಒಂದು ಕಟ್ಟಡ ಹಾಗೂ ಆತ್ಮೀಕ ನಾಯಕತ್ವದ ಅಗತ್ಯವಿಲ್ಲ ಎಂಬ ಅರ್ಥವಿಲ್ಲ. ಯಾವುದೇ ಸಂಸ್ಥೆಯು ನಾಯಕತ್ವವಿಲ್ಲದೆ ಮುನ್ನಡೆಯಲಾರದು.[19] ಪ್ರತಿ ಸಭೆಗೂ ನುರಿತ ಹಿರಿಯರ ಅಗತ್ಯವಿದೆ (ತೀತ 1:5). ರಾಜ್ಯ/ಸಭೆ ಲೌಕಿಕವಾದ ವ್ಯವಸ್ಥೆಯ ಪ್ರಕಾರವಿರಬಾರದು.[20] ಅಂಥಹ ನಾಯಕರಿಗಿಂತಲೂ, ಸಭೆಯ ನಾಯಕತ್ವವು ವಿಭಿನ್ನವಾಗಿರಬೇಕು. "ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ಮೊದಲನೆಯವನು, *ಆಳಾಗಿರಬೇಕು"* (ಮತ್ತಾಯ 20:26ಬಿ; ಒತ್ತಿ ಹೇಳಿದ್ದು ನನ್ನದು).

ಯೇಸುವಿನ ಬೋಧನೆಯಲ್ಲಿ ಬಳಸಲಾದ "ಆಳು" ಎಂಬ ಮಾತು ನಮ್ಮೆಲ್ಲರಿಗೆ ಬಹಳ ಪರಿಚಿತವಾದ ಪದವಾಗಿದೆ. ಈ ಪದವನ್ನು ಅಲಂಕೃತಮಾಡಿ ಹೆಮ್ಮೆ ಪಡುತ್ತೇವೆ: ಅದನ್ನು ನಾವು "ಈತನು ದೇವರ ಮಹಾಸೇವಕ" ಎಂದು ಸಂಬೋಧಿಸುತ್ತೇವೆ. ಹಳೆ ಒಡಂಬಡಿಕೆಯ ಜನರು "ಸೇವಕ" ಅನುವಾದವನ್ನು ಕರಂಗತ ಮಾಡಿಕೊಂಡಿದ್ದರು: ಅವನು ಹೀನವಾದ ಕೆಲಸಮಾಡುವವನು, ಆ ಕೆಲಸವನ್ನು ಇತರರು ಮಾಡಲು ಬಯಸಲಿಲ್ಲ, ಅವನನ್ನು ಯಾರೂ ಸಹ ಮೆಚ್ಚುತ್ತಿರಲಿಲ್ಲ, ಅವನು ಮಾಡಿದ ಕೆಲಸಕ್ಕೆ ಯಾರೂ ಕೃತಜ್ಞತೆ ಹೇಳುತ್ತಿರಲಿಲ್ಲ (ಲೂಕ 17:10; KJV). ಆದ್ದರಿಂದ ಯೇಸು "ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವನು ಸೇವಕನಾಗಲಿ" ಎಂದು ಹೇಳಿದನು.

ಯೇಸುವಿನ ಬೋಧನೆಯು ಕ್ರಾಂತಿಕಾರಿಯಾಗಿತ್ತು. ಸೇವೆ ಮಾಡುವಂಥದ್ದನ್ನು ಯೇಸು ಕೊಂಡಾಡಿದನು.[21] ಲೌಕಿಕ ದೃಷ್ಟಕೋನವನ್ನು ಯೇಸು ಪೂರ್ಣವಾಗಿ ಬದಲಿಸಿದನು. "... ಅಂಥಹ ಜೀವನಕ್ಕೆ ಯೇಸು ಪೂರ್ಣ ಬೆಂಬಲವನ್ನು ನೀಡಿದನು."[22] ಇತರರನ್ನು ನಮಗಿಂತಲೂ ಉತ್ತಮರೆಂದು ಭಾವಿಸಬೇಕು (ಫಿಲಿಪ್ಪಿ 2:3).

ಶಿಷ್ಯರು ಈ ತತ್ವವನ್ನು ಅರಿಯದಾಗಿದ್ದರೆ, ಅಂಥವರಿಗೆ ಯೇಸು, "ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ನಿಮ್ಮ ಆಳಾಗರಬೇಕು" ಎಂದು ನೆನಪು ಮಾಡಿದನು (ಮತ್ತಾಯ 20:27). ವಚನ 26ರಲ್ಲಿ, "ಆಳು" ಎಂಬುದನ್ನು (*diakonos*) ಎಂದು ಬಳಿದ್ದರೆ, ಈಗ ಅದನ್ನು "ಗುಲಾಮ" (*doulos*) ಆಳಾಗಿರುವದು ಬೇಸರದ ಸಂಗತಿಯಾದರೆ "ಗುಲಾಮ" ನಾಗಿರುವದು ಅತಿ ಬೇಸರದ ಸಂಗತಿಯಲ್ಲವೇ. ಗುಲಾಮನು ಬೇರೆಯವರ ಸ್ವತ್ತು! ಅವನು ಯಾವುದೇ ಹಕ್ಕನ್ನು ಹೊಂದಿರಲಿಲ್ಲ! (ದೇವರಿಗೆ ಗುಲಾಮ ಎಂದು ಹೇಳಿ ಕೊಳ್ಳುವದು ಸುಲಭ "ಆದರೆ ಬೇರೆಯವನಿಗೆ ಗುಲಾಮ" ಎನ್ನುವದು ಆಸಕ್ತಿಕರವಲ್ಲ.[23])

ಅಪೊಸ್ತಲರಿಗೆ ಅನ್ವಯಿಸುವ ವಿಚಾರವೇನೆಂದರೆ, "ನೀನು ಮೊದಲಿಗರಾಗಬೇಕೆಂದರೆ" ಮೊದಲಿಗರಾಗುವ ಚರ್ಚೆಯನ್ನು ನಿಲ್ಲಿಸಿ ಎಂಬದೆ ಗೌರವ ಹಾಗೂ ಮಾನವನ್ನು ಕೇಳದೆ, ಇತರರಿಗೆ ಸೇವೆ ಮಾಡಿರಿ. ಆತನ ಮಾಚುಗಳು ನಮಗೂ ಅನ್ವಹಿಸುತ್ತದೆ; ನಿಮಗಾಗಿ, ನಿಮ್ಮ ಅಗತ್ಯಗಳಿಗಾಗಿ ಚಿಂತಿಸದೆ, ಇತರರ ಕೊರತೆಗಳ ಕಡೆಗೆ ದೃಷ್ಟಿ ಹಾಯಿಸಿರಿ, ಮತ್ತು ಅವರಿಗೆ ಸಹಾಯಿಸಿರಿ.

ಒಬ್ಬ ಬಾಲೆ ನಿಸ್ವಾರ್ಥದ ಬಗ್ಗೆ ಕೇಳಲ್ಪಟ್ಟ ನಂತರ, ಒಂದು ಕಾಗದದ ಮೇಲೆ, "ನಮ್ಮನ್ನು ನಿರಾಕರಿಸುವದು *ಮನುಷ್ಯತ್ವವಲ್ಲ* ಎಂದು ಬರೆದಳು!"[24] ಆಕೆ ಬರೆದದ್ದು ಸರಿಯೇ ಆಗಿತ್ತು. ನಮ್ಮನ್ನು ನಾವೇ ನಿರಾಕರಿಸಿಕೊಳ್ಳುವದು ನಮ್ಮ ಗುಣವಾಗಿರದೆ, ದೇವರ ಇಷ್ಟವಾಗಿದೆ, ಯೇಸು ತನ್ನ ಶಿಷ್ಯರಿಗೆ ಇದನ್ನು ಹೇಳದೆ, ತಾನೇ ಅದನ್ನು ಮಾಡಲು ಮುಂದಾದನು. "ಹಾಗೆಯೇ ಮನುಷ್ಯ ಕುಮಾರನು ಸೇವೆ ಮಾಡಿಸಿಕೊಳ್ಳುವದಕ್ಕೆ ಬರಲಿಲ್ಲ. ಸೇವೆ ಮಾಡುವದಕ್ಕೆ ಬಂದನು"[25] (ಮತ್ತಾಯ 20:28ಎ; ನೋಡಿ ಲೂಕ 22:27). ಕರ್ತನು ತಾನು ಸೇವೆ ಮಾಡಿಸಿಕೊಳ್ಳುವಂಥ ಧೈವೀಕ ಹಕ್ಕನ್ನು ಹೊಂದಿದ್ದನು.[26] ನಂತರದಲ್ಲಿ ಪೇತ್ರನು ಕ್ರಿಸ್ತನ ಜೀವಿತವನ್ನು ಆತನು ಉಪಕಾರವನ್ನು ಮಾಡುತ್ತಾ "ಮುಂದುವರೆದನು" ಎಂದು ಬರೆದನು (ಅಪೊಸ್ತಲರ ಕತ್ಯಗಳು 10:38). ಆತನು ಜನರ ಕೊರತೆಗಳಿಗೆ ಸ್ಪಂದಿಸಿದನು. ಸಹಾಯಿಸಲು ಯಾವಾಗಲೂ ಸಿದ್ಧನಿದದನು. ಆತನು ಆಯಾಸಗೊಳ್ಳಲಿಲ್ಲ, ಇತರೆ ಕೆಲಸದಲ್ಲಿ ನಿರತನಾಗಲಿಲ್ಲ, ಸೇವೆ ಮಾಡಲು ಸಿದ್ದನಿದ್ದನು.[27]

ಯೇಸು ತನ್ನನ್ನು ಇತರರಿಗಾಗಿ ಸಮರ್ಪಿಸುವ ಸೇವೆಯ ಕುರಿತು ಮಾತಾಡಿದನು: ಆತನು, "ತನ್ನ ಪ್ರಾಣವನ್ನು ಈಡುಕೊಡುವದಕ್ಕೆ ಬಂದನು" (ಮತ್ತಾಯ 20:28ಬಿ). ಆತನು ಬಂದಂಥ ಉದ್ದೇಶವನ್ನು ಅನೇಕ ಬಾರಿ ತಿಳಿಸಿರುವನು: "ನಾನು ನೀತಿವಂತರನ್ನು ಕರೆಯಲು ಬಾರದೆಸ ಪಾಪಿಗಳನ್ನು ಮಾನಸಾಂತರಕ್ಕೆ ಕರೆಯಲು ಬಂದೆನು (ಮಾರ್ಕ 5:32; ನೋಡಿ ಮತ್ತಾಯ 9:13). "ಮನುಷ್ಯ ಕುಮಾರನು ಕೆಟ್ಟು ಹೋಗಿರುವದನ್ನು ಹುಡುಕಿ

ರಕ್ಷಿಸುವದಕ್ಕೆ ಬಂದನು ಎಂದು ಹೇಳಿದನು" (ಲೂಕ 19:10). ಮತ್ತಾಯ 20:28ರಲ್ಲಿ ಉದ್ದೇಶದ ಹೇಳಿಕೆಯನ್ನು ನೀಡಿ, ಆ ಉದ್ದೇಶವನ್ನು ಆತನು ಈಡೇರಿಸುವ *ರೀತಿಯನ್ನು* ತಿಳಿಸಿ: "*ಸೇವೆ ಮಾಡುವದಕ್ಕೂ, ಅನೇಕರನ್ನು ಬಿಡಿಸಿಕೊಳ್ಳುವದಕ್ಕೂ* ತನ್ನ ಪ್ರಾಣವನ್ನು ಈಡುಕೊಡುವದಕ್ಕೂ ಬಂದನು" (ಒತ್ತಿ ಹೇಳಿದ್ದು ನನ್ನದು.)

"ಅಪಹರಣದ" ಕ್ರಿಯೆಯಲ್ಲಿ "ಈಡು" ಎಂಬ ಪದ ಬಳಕೆಯಗುತ್ತದೆ: ಅಪಹರಣ ಮಾಡಿದ ವ್ಯಕ್ತಿಯನ್ನು ಬಿಡುಗಡೆಗೊಳಿಸಲು, ಅಪಹರಣಕಾರರು ಇಂತಿಷ್ಟು ಹಣವನ್ನು ನೀಡಬೇಕೆಂಬ ನಿಬಂಧನೆಯನ್ನು ಮುಂದಿಡುತ್ತಾರೆ. ಅಂಥದ ಪದವನ್ನು ಗ್ರೀಕ್ ಭಾಷೆಯಲ್ಲಿ "ಈಡು" (ಲೂಟ್ರನ್) ಎಂದು ಬಳಸಿದ್ದರೂ, ಅದರ ಅರ್ಥ ಇನ್ನೂ ಆಳವಾಗಿದೆ. ಸೆಪ್ಟಜೂಯಂಟ್[28] ಬರಹದಲ್ಲಿ ಒಬ್ಬ ಗುಲಾಮನನ್ನು ದಾಸತ್ವದಿಂದ ಬಿಡಿಸುವ ವಿಚಾರದಲ್ಲಿ ಇಂತಿಷ್ಟು ಹಣವನ್ನು ನೀಡಿ ಅವನನ್ನು ವಿಮೋಚಿಸಬೇಕಿತ್ತು.[29] ಇದನ್ನು "ವಿಮೋಚನೆಗೆ ಹಣ" ಎಂದು ಸಂಕ್ಷಿಪ್ತವಾಗಿ ಹೇಳಬಹುದು.[30]

ಹೊಸ ಒಡಂಬಡಿಕೆಯಲ್ಲಿ "ಪಾಪದ ಪರಿಹಾರಕ್ಕಗಿ" ಈಡು ಎಂದು ಅಗಮ್ಯವಾಗಿ ಈ ವ್ಯಾಖ್ಯಾನವನ್ನು ಉಪಯೋಗಿಸಲಾಗಿದೆ. ಮತ್ತಾಯ 20:28 ಹಾಗೂ ಮಾರ್ಕ 10:45ರಲ್ಲಿ *"ಲೂಟ್ರನ್"* (Lutron) ಎಂಬ ಪದ ಬಳಸಲಾಗಿದೆ. ವಿಮೋಚನಾರ್ಥವಾಗಿ[31] ವಿಧ ವಿಧವಾದ ಪದಗಳನ್ನು ಇತರೆ ಕಡೆಗಳಲ್ಲಿ ವ್ಯಾಖ್ಯಾನಿಸಲಾಗಿದೆ. "ಏಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು" (1 ತಿಮೊಥೆ 2:5, 6).[32]

ಮತ್ತಾಯ 20:28ರ, ವ್ಯಾಖ್ಯಾನವನ್ನು ಅನೇಕರು ಜಟಿಲ ಮಾಡಿದ್ದಾರೆ: "*ಅನೇಕರನ್ನು* ಬಿಡಿಸಲು" ತಿಮೋಥೆ 2:6ರಲ್ಲಿ "*ಎಲ್ಲರನ್ನು* ಬಿಡಿಸಲು" ಮತ್ತಾಯನ *ಅನೇಕರು*[33] ಎಂಬುದನ್ನು ಯಾರಿಗಾಗಿ ಈಡು, ಸೈತಾನನಿಗೋ ಅಥವಾ ದೇವರಿಗೋ ಅಂಥಹ ಸಂದೇಹವು ಹೊರಗಿನಿಂದ ಬಂದದ್ದು. "ಬಿಡುಗಡೆಗಾಗಿ ನಿತ್ಯವಾದ ಈಡು"[34] ಅದು ಯಾರಿಗೆ ಎಂಬದು ತಿಳಿದಿರುವದಿಲ್ಲ.

ಮನುಷ್ಯರನ್ನು ದೇವರ ಬಳಿಗೆ ಸೇರಿರುವದಕ್ಕಾಗಿ,[35] "ಯೇಸು ಕ್ರಿಸ್ತನ ಮರಣವಾಯಿತು" ಎಂಬ ಮಹಾ ಸತ್ಯವನ್ನು ಮತ್ತಾಯ 20:28ರಲ್ಲಿ ಪ್ರಕಟಿಸಲಾಗಿದೆ. ಪೇತ್ರನು ಇದನ್ನು "ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ನಿಮಗೆ ಬಿಡುಗಡೆಯಾದದ್ದು ಬೆಳ್ಳಿ … ಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ, ಪೂರ್ಣಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ ಎಂದು ಬಲ್ಲಿರಲ್ಲವೇ" (1 ಪೇತ್ರ 1:18, 19) ತಿಳಿಸಿರುವನು. ಪೌಲನು ಸಹ ಇದನ್ನು, "ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ" (1 ಕೊರಿಂಥ 6:20) ಎಂದಿರುವನು.

ಮೊದಲು ಇರಬೇಕು ಎನ್ನುವವನು, ಆಳಾಗಿರಬೇಕು ಎಂದು ಯೇಸು ತಿಳಿಸಿದ್ದಾನೆ. ಅದರಲ್ಲಿ ಆತನೇ ಮೊದಲಿಗನಾಗಿದ್ದಾನೆ; ಯಾಕಂದರೆ ಆತನು *ಮಹಾ* ಸೇವೆಯನ್ನು ಮಾಡಿದ್ದಾನೆ. ಕ್ರಿಸ್ತನು ನಮ್ಮ ಪಾಪಗಳಿಗಾಗಿ ಸತ್ತನು (1 ಕೊರಿಂಥ 15:3)!

## ಸಕಲ ಶಿಷ್ಯರು

**ಸ್ವ-ಆಸಕ್ತಿ**

ಅಂತಿಮಗೊಳಿಸುವ ಮೊದಲು, ಯೇಸುವಿನ ಈ ಪಾಠಗಳನ್ನು ನಮಗೆ ಅಳವಡಿಸಿಕೊಳ್ಳೋಣ. ಹೌದು ಸಭೆಯು ಸ್ಥಾಪನೆಯಾದಾಗ, ಶಿಷ್ಯರ ಧೈಹೀಕವಾದ ಇಚ್ಛೆಗಳು ಈಗ ಹೊರಟು ಹೋದವು. ಆದರೆ ನಮ್ಮಲ್ಲಿ ಅನೇಕರು, ಈ ಲೋಕದ ಪರಿಸರವನ್ನು

ಅಂಟಿಗೊಂಡು ಪ್ರಯಾಣ ಮಾಡುತ್ತಿದ್ದೇವೆ, ಆದ್ದರಿಂದ ತಪ್ಪಿಸಿಕೊಳ್ಳುವದು ಕಠಿಣವಾಗಿದೆ.[37] "ಮೊದಲಿಗಾಗುವದಕ್ಕೆ ಪ್ರಯತ್ನಿಸಿ[38] ಎಂಬ ಲೌಕೀಕ ಧ್ಯೇಯ ವಾಕ್ಯವನ್ನು" ಅನುಸರಿಸುತ್ತಿದ್ದೇವೆ. ಸ್ವಾರ್ಥವು ಸಭೆಯನ್ನು ಅನಾರೋಗ್ಯದ ಕಡೆಗೆ ನಡೆಸುತ್ತದೆ: ಅನೇಕ ಸಭೆಗಳು, ಅನೇಕ ಸಾರಿ ಸಂಖ್ಯಾ ಬಲವನ್ನು ಹಾಗೂ ಯಶಸ್ಸನ್ನು ಅವಲಂಬಿಸುತ್ತವೆ. ಆದರೆ ಸೇವೆಯು ಕ್ರೈಸ್ತರ ಮೂಲ ಧ್ಯೇಯ ಎಂಬುದನ್ನು ಮರೆತಿದೆ. ಸ್ವ ಆಸಕ್ತಿಯು ಕ್ರೈಸ್ತರಾದ ನಮ್ಮ ಮೇಲೆ ಸಹ ಪ್ರಭಾವ ಬೀರುತ್ತದೆ: ದೊಡ್ಡ ಸಭೆಗಳಲ್ಲಿ ಪ್ರಸಂಗಿಸುವ ಆಸೆ ಹಿರಿಯರಾಗಿ ಅಧಿಕಾರ ಪಡೆಯುವ ಆಸೆ, ನಮ್ಮಲ್ಲಿ ಕೆಲವರಿಗೆ (ನಾವುಗಳು ಒಪ್ಪುವದಾದರೆ) ಅವರು ಮಾಡಿದ ಉತ್ತಮ ಕ್ರಿಯೆಗಳಿಗಾಗಿ ಪ್ರಶಂಸೆ ಪಡೆಯುವ ಆಸಕ್ತಿ ಇದೆ, ಅದು ದೊರಕದಿದ್ದರೆ, ಬೇಸರಗೊಳ್ಳುತ್ತವೆ. "ಸೇವಕ" ಎಂಬುದಕ್ಕೆ ಬರೀ ಮಾತಿನ ಗೌರವವನ್ನು ನೀಡುತ್ತೇವೆ, ಆದರೆ ಮಾನಸಿಕವಾಗಿ "ಸೇವಕನ" ಭಾವವನ್ನು ಹೊಂದಿರುವದಿಲ್ಲ, ಮತ್ತು ನಿಶ್ಚಯವಾಗಿ "ಗುಲಾಮ" ಎನ್ನಿಸಿಕೊಳ್ಳುವದಿಲ್ಲ.

**ಸ್ವ-ನಿರಾಕರಣೆ**

ಆದಾಗ್ಯೂ, ಪುನಃ ಯೇಸು: "ಆದರೆ ನಿಮ್ಮಲ್ಲಿ ದೊಡ್ಡವನು, ನಿಮ್ಮ ಸೇವಕನಾಗಿರ ಬೇಕು ಮೊದಲನೆ ಆಳಾಗಿರಬೇಕು ಎಂದು ಹೇಳುತ್ತಿದ್ದಾನೆ" (ಮತ್ತಾಯ 20:26, 27). ಗುಲಾಮನಾಗುವ ವಿಚಾರಕ್ಕೆ ಯಾಕೋಬ ಮತ್ತು ಯೋಹಾನರ ಮನವಿಯ ಪ್ರಕಾರದ "ಸಿಂಹಾಸನದ" ವಿಚಾರವನ್ನು ಹೋಲಿಸುವದಾದರೆ, ಅದು ವಿಭಿನ್ನವಾಗಿರುತ್ತದೆ. ಮತ್ತಾಯ 20:26, 27 ಪ್ರಕಾರ, ಇಂಥಹ ಮಹಾ ಪದವಿಯನ್ನು ಬಯಸುವವರು, ನಿಸ್ವಾರ್ಥಿಗಳೂ, ಹಾಗೂ ತಮ್ಮನ್ನೇ ತ್ಯಾಗ ಮಾಡುವವರೂ ಆಗಿರಬೇಕು. ಕ್ರಿಸ್ತನ ಸಿಂಹಾಸನದಲ್ಲಿ, ಸತ್ಯವೇದ ದಲ್ಲಿ ದಾಖಲಾಗಿರುವ ಪೇತ್ರ, ಪೌಲ, ಯೋಹಾನ, ಯಾಕೋಬ ಇವರು ಪಾಲುಗಾರರಾಗದೆ, ಯಾವುದೇ ಪ್ರಶಂಸೆಯನ್ನು ಪಡೆಯದೇ ಏಕಾಂಗಿಗಳಾಗಿ, ದೀನರಾಗಿ ಸೇವೆಮಾಡಿರುವ ಸೇವಕರಿಗೆ ಅದು ಮೀಸಲಾಗಿರಬಹುದು.

## ಮುಕ್ತಾಯ

ನೀನು ಬೆಳೆದು ಏನಾಗಬೇಕೆಂದಿರುವಿ? ಇದರಲ್ಲಿ ಮೊದಲನೆಯ ಪ್ರಶ್ನೆ "ನೀನು ಆತ್ಮೀಕ ವಾಗಿ ಬೆಳೆಯಲು *ಪ್ರಯತ್ನಿ* ಸುತ್ತಿರುವಿಯಾ?" ಕೆಲವರು ಆತ್ಮೀಕ ಕೂಸುಗಳಗಿರಲು ಮಾತ್ರ ತೃಪ್ತರಾಗಿದ್ದಾರೆ (ಇಬ್ರಿಯ 5:12-14). ಎರಡನೆಯ ಪ್ರಶ್ನೆ, *"ಸೇವಕ*ನಾಗುವ ಗುರಿಯನ್ನು ಹೊಂದಿರುವಿಯಾ?" ಕ್ರಿಸ್ತನ ಮನಸ್ಸನ್ನು ಹೊಂದಿಕೊಂಡು (ಫಿಲಿಪ್ಪಿ 2:5; KJV) "ಆತನ ಹೆಜ್ಜೆಯ ಜಾಡಿನಲ್ಲಿ" ನಡೆದು (1 ಪೇತ್ರ 2:21). "ಆತನ ಸ್ವರೂಪಕ್ಕೆ ಮಾರ್ಪಾಟಾಗಿ" (ರೋಮಾಪುರ 8:29). ಇರುವದು ನಮಗೆ ಒಂದು ಸವಾಲಾಗಿದೆ. "ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು" (ಎಫೆಸ 4:15).[39] ಈ ರೀತಿಯಾಗುವದಕ್ಕೆ ದೇವರು ಸಹಾಯ ಮಾಡಲಿ!

---

## ಮಾಹಿತಿ

"ಸೇವಕನಾಗುವ ತವಕ" ಕರ್ತನ ಒಂದು ಕಠಿಣವಾದ ಆಜ್ಞೆ! ನಿನ್ನ ಆತ್ಮೀಕ ಗುರಿಗಳೇನು? ಎಂಬ ಇತರೆ ತಲೆಬರಹವನ್ನು ನೀಡಬಹುದು. "ಮಹತ್ವದ ಸ್ಥಾನ"ವನ್ನು ಪಡೆಯುವದು ಹಾಗೆ ಎಂದು ಪ್ರಸಂಗಿಸಿ, ಆತ್ಮೀಕ ಜೀವಿತದ ಬಗ್ಗೆ ಸ್ಟಾರ್ಟ್ ಬ್ರಿಸ್‌ಕೋ ರವರು ಮೂರು ಅಂಶಗಳನ್ನು ತಿಳಿಸಿ: (1) ನೀನು *diakonos* (ಸೇವಕನಾಗಬೇಕು); ನಾಸ್); (2) ನೀನು *doulos* ಆಗಿರಬೇಕು (ಗುಲಾಮ); (3) ನೀನು ಕೂಡುವವನಾಗಿರಬೇಕು (ಯೇಸು ತನ್ನನ್ನೇ ಅರ್ಪಿಸಿದ್ದಾನೆ)[40] ರಿಚರ್ಡ್ ರೋಜರ್ಸ್‌ರವರು, ಸೇವೆ ಗುಲಾಮತ್ವ ಹಾಗೂ ತ್ಯಾಗ

ಎಂದು ತಿಳಿಸಿರುವರು.[41] ಸೇವಕನ ಕುರಿತಾಗಿ ಚಾರ್ಲ್ಸ್ ಸ್ವಿಂಡಲ್‌ರವರ *ಇಂಪ್ರೂವಿಂಗ್ ಯುವರ್ ಸರ್ವ್* ಪುಸ್ತಕ ಬಳಸಿ,[42] ನಿಮ್ಮ ಪ್ರಸಂಗದಲ್ಲಿ ಇದೇ ತಲೇಬರಹವನ್ನು ಬಳಸಬಹುದು.

"ನಿಮ್ಮ ಮಕ್ಕಳು ಏನಾಗಬೇಕು ಎಂದು ಬಯಸುವಿರಿ?" ಎಂಬ ತಲೆ ಬರ ಬಳಸಬಹುದು. ಸಲೋಮಿ ತಾನು ಏನನ್ನು ಕೇಳಿದಳು ಎಂದು ಅರಿಯಳು. ತನ್ನ ಮಕ್ಕಳಿಗೆ ನೋವು ಹಾಗೂ ಮರಣವನ್ನು ಕೇಳಿದಳು ಎಂದು ಅರಿಯಳು. ನಿಮ್ಮ ಮಕ್ಕಳ ಬಗ್ಗೆ ಯಾವ ಕನಸನ್ನು ಹೊಂದಿರುವಿರಿ ಎಂಬ ವಿಚಾರದಲ್ಲಿ ಎಚ್ಚರವುಳ್ಳವರಾಗಿರ್ರಿ.

"ತಪ್ಪುಗಳನ್ನು ಬಯಲಿಗೆಳೆಯಬೇಕು" ಎಂಬ ಪ್ರಸಂಗ ಮಾಡಿರಿ. ನಕಾರಾತ್ಮಕವನ್ನು ನಾವು ಯಾರೋ ಬಯಸುವದಿಲ್ಲ. ಆದರೆ ತಪ್ಪುಗಳನ್ನು ಬಯಲು ಮಾಡಲೇ ಬೇಕು. ಮತ್ತಾಯ 20ರಲ್ಲಿ ತಪ್ಪುಗಳನ್ನು ಆತನು ತೋರಿಸಿದ್ದಾನೆ: (1) ಅರಸ ಮತ್ತು ಆತನ ಸೇವೆ (ವಚನಗಳು 17-19), (2) ಆತನ ರಾಜ್ಯ ಮತ್ತು ಸ್ವಭಾವ (ವಚನಗಳು 20-23), (3) ಅರಸ ಮತ್ತು ಅದರ ಮಹತ್ವ.

---

ಟಿಪ್ಪಣಿಗಳು

[1]ನೀವಿರುವ ಸ್ಥಳಗನುಗುಣವಾಗಿ ಉಪಯೋಗಿಸಿರಿ. [2]ಹೊಸ ಒಡಂಬಡಿಕೆಯ ಆತ್ಮೀಕ ವೃದ್ಧಿಯನ್ನು ಬಯಸುತ್ತದೆ (ಎಫೆಸ 4:15; 1 ಪೇತ್ರ 2:2; 3:18). ಅದನ್ನು "ಪರಿಪಕ್ವತೆ" ಎನ್ನುತ್ತಾರೆ (ನೋಡಿ 1 ಕೊರಿಂಥ 14:20; ಎಫೆಸ 4:13). [3]ಮಕ್ಕಳು ತಂದೆತಾಯಿಗಳ ಮೇಲೆ ಒಂದು ಸಲವಾದರೂ ಪ್ರಯೋಗಿಸುತ್ತಾರೆ. [4]ಮತ್ತಾಯ 19:28ರ ವಿವರಣೆ ನೋಡಿರಿ. [5]ಯೇಸು ಅವರ ಕೋರಿಕೆಯನ್ನು ಈಡೇರಿಸಿದ್ದರ, ಸ್ಥಾನ ಮಾನಕ್ಕಾಗಿ ಅವರು ಬೇಗನೆ ಕಾದಾಡುತ್ತಿದ್ದರು. [6]James Burton Coffman, *Commentary on Mark* (Austin, Tex.: Firm Foundation Publishing House, 1975), 217. ನಾನು ಮೊದಲನೆಯ ಸಾರಿ J. W. Roberts ರವರ ಈ ಸಾಮ್ಯವನ್ನು 1950 ರಲ್ಲಿ ಕೇಳಿದೆನು. [7]James Burton Coffman, *Commentary on the Gospel of Matthew* (Austin, Tex.: Firm Foundation Publishing House, 1968), 312. ನಿಮ್ಮ ದೇಶದಲ್ಲಿರುವ ರಾಜಕೀಯ ಸ್ಥಾನಗಳಿಗೆ ಈ ಸಾಮ್ಯಗಳನ್ನು ಬಳಸಬಹುದು. [8]ಡೇಲ್ ಹಾರ್ಟ್ ಮನ್‌ರವರ ಪ್ರಸಂಗ 2000. [9]ಅವರಲ್ಲಿ ಯಾರು ಮೊದಲಿಗೆ ಕೇಳಿದರೆಂಬ ಮಾಹಿತಿ ಇಲ್ಲ. [10]ಆಸ್ತ್ರೀಯರು ಯೇಸುವಿನೊಂದಿಗೆ ಪ್ರಯಾಣಮಾಡಿ, ಯೇಸುವಿನ ಹಾಗೂ ಅಪೊಸ್ತಲರ ಕೊರತೆಯನ್ನು ನೀಗಿಸಿದ್ದರು.

[11]ಅಪೊಸ್ತಲರು ಜೆಬೆದಾಯನ ತಾಯಿಯನ್ನು ಹೊರತುಪಡಿಸಿ, ಅವಳ ಮಕ್ಕಳ ಕುರಿತಾಗಿ ಬೇಸರ ಗೊಂಡಿದ್ದರು (ಮಾರ್ಕ 15:40, 41). [12]ಪ್ರಸಂಗದಲ್ಲಿ "ಹೊರಸೂಸುವ ಆನಂದ, ಮತ್ತು ದೇವರ ಕೈಯಿಂದ ಅನುಭವಿಸಿದ ಘೋರವಾದ ವೇದನೆ" ಎಂದು ಬಳಸಿರಿ. ನಮ್ಮ ಪಾಪಗಳೇ ಆತನಿಂದ ನಮ್ಮನ್ನು ಪ್ರತ್ಯೇಕ ಮಾಡಿದೆ, ಆತನು ನಮ್ಮ ಶಿಕ್ಷೆಯನ್ನು ಅನುಭವಿಸಿದನು. [13]ಈ ಹಿಂದೆ ಯೇಸು ಲೂಕ 12:50ರ ಊಹೆಯನ್ನು ಬಳಸಿದ್ದಾನೆ. [14]ರೋಮಾಯರನ್ನು ಸೋಲಿಸಿ, ಇಸ್ರಾಯೇಲ್ ರಾಜ್ಯವನ್ನು ಮೆಸ್ಸೀಯನು ಸ್ಥಾಪಿಸುವನೆಂದು ಯೆಹೂದ್ಯರು ಭಾವಿಸಿದ್ದರು. [15]ಅವರು "ಗುಡುಗಿನ ಮರಿಗಳಾಗಿದ್ದರು" (ಮಾರ್ಕ 3:17). ಅವರೂ ಸಹ ಇತರೆ ಅಪೊಸ್ತಲರಂತೆ ಆತನನ್ನು ಬಿಟ್ಟು ಓಡಿ ಹೋದರು. [16]ಮತ್ತಾಯ 26:33, 35ರ ಪೇತ್ರನ ಸಿದ್ಧವಾದ ಮಾತನ್ನು ನೆನಪು ಮಾಡಬಹುದು. [17]ಮಾರ್ಕ 13:32. [18]ಆತನು ವೇದನೆ ಪಟ್ಟು ಶಿಲುಬೆಗೆ ಹಾಕಿಸಿಕೊಂಡಾಗ, ಆತನ ಎಡ ಮತ್ತು ಬಲಭಾಗದಲ್ಲಿ ವೇದನೆಗೊಂಡ ಕಳ್ಳರನ್ನು ಶಿಲುಬೆಗೆ ನೇತು ಹಾಕಿದ್ದರು. [19]ಲೋಕದ ಒಂದ ನಿದರ್ಶನವನ್ನು ನೀಡಬಹುದು. [20]ಸಂಘಟಿತ ಸಂಘಟನೆಯು ವಾಕ್ಯಕ್ಕನುಗುಣವಾದದ್ದಲ್ಲ.

[21]William Barclay, *The Gospel of Matthew,* vol. 2, rev. ed., The Daily Study Bible Series (Philadelphia: Westminster Press, 1975), 232. [22]Ibid. [23]ದೇವರ ಗುಲಾಮ, 1 ಕೊರಿಂಥ 7:22; "ಮನುಷ್ಯರ ಗುಲಾಮ" ಮಾರ್ಕ 13:32. [24]Allison Martin, "But, Denying Self Is Not Human!" *Power for Today* (April-June 2001): 42. [25]ಡಾನಿಯೇಲ್ 17, ಮತ್ತಾಯ 20:28 "ಮನುಷ್ಯ ಕುಮಾರನು ಬಾಧೆಗೊಳಗಾದ ಸೇವಕ" ಯೆಶಾಯ 52:53. [26]D. Stuart Briscoe, *Expository Nuggets from the Gospels* (Grand Rapids, Mich.: Baker Books,

1994), 141 ರಿಂದ ಈ ವಾಕ್ಯವು ತೆಗೆದುಕೊಳ್ಳಲಾಗಿದೆ. [27]ಯೇಸುವಿನ ಸೇವೆಯ ನಿದರ್ಶನ ನೀಡಬಹುದು. [28]ಸೆಪ್ಟೆಜುಯಂಟ್ "ಹಳೆ ಒಡಂಬಡಿಕೆಯ ಗ್ರೀಕ್ ಅನುವಾದ." [29]"ಒಂದು ನಷ್ಟಕ್ಕೆ" ಹಣವನ್ನು ನೀಡುವದು. (ವಿಮೋಚಕಕಾಂಡ 21:29, 30) (ಅರಣ್ಯಕಾಂಡ 18:15) (ಯಾಜಕಕಾಂಡ 25:51, 52). [30]See Geoffrey W. Bromiley, *Theological Dictionary of the New Testament,* abr. (Grand Rapids, Mich.: Wm. B. Eerdmans Publishing Co., 1985), 545.

[31]ರೋಮಾಪುರ 3:24; ಎಫೆಸ 1:7; ಮತ್ತು ಇಬ್ರಿಯ 9:12. [32]ಮತ್ತಾಯ 20:28; 1 ತಿಮೊಥೆ 2:6; ಲೂಟ್ರನ್ (ಬದಲಾಗಿ) (ಅದಕ್ಕೆ ಬದಲಾಗಿ). [33]Jack P. Lewis, *The Gospel According to Matthew, Part 1*, The Living Word Commentary Series, ed. Everett Ferguson (Abilene, Tex.: ACU Press, 1976), 81. [34]John Philpot Curran ರವರು Dublin, Ireland, 10 ಜುಲೈ 1790 ನಲ್ಲಿ ಹೇಳಿದ ಹೇಳಿಕೆಯ ಮೇಲೆ ಈ ವಾಕ್ಯವು ಆಧಾರಗೊಂಡಿದೆ. [35]Barclay, 235. [36]"ವಿಮೋಚಿಸಲ್ಪಟ್ಟವರು" ಎಂಬ ಪದವು *lutron* ಗುಂಪಿಗೆ ಸಂಬಂಧಿಸಿದೆ. [37]Joost De Blank, *Uncomfortable Words* (London: Longmans, Green and Co., 1958), 54. [38]"ಸಂಖ್ಯೆ ಒಂದನ್ನು" ಒಬ್ಬನ ಸ್ವಯಕ್ಕೆ ಬಳಸುವುದಾಗಿದೆ. [39]ಪ್ರಾರ್ಥನೆಗೆ ಹಾಗೂ ದೀಕ್ಷಾಸ್ನಾನಕ್ಕೆ ಆಹ್ವಾನನೀಡಿ (ಯಾಕೋಬ 5:16; ಮರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38). [40]Briscoe, 141.

[41]Richard Rogers, *Behold Your King (Book of Matthew)* (Lubbock, Tex.: Sunset Study Series, n.d.), 26. [42]Charles R. Swindoll, *Improving Your Serve: The Art of Unselfish Living* (Waco, Tex.: Word Books, 1981). "ನಿಮ್ಮ ಸೇವೆಯನ್ನು ಅಭಿವೃದ್ಧಿಗೊಳಿಸಿಕೊಳ್ಳಲು" ಟೆನಿಸ್ ಆಟದ ಪ್ರಯೋಗದ ಭಾಷೆಯನ್ನು ಬಳಸಲಾಗಿದೆ; ಅದು ಒಬ್ಬನು ಆಟದಲ್ಲಿ ಮೊದಲನೆಯ ಹೊಡೆಯುವದನ್ನು (ಚಂಡು ಹೊಡೆತ) ಸೂಚಿಸುತ್ತದೆ. [43]Alger Fitch, *Preaching Christ* (Joplin, Mo.: College Press, 1992), 113 ರಿಂದ ಈ ಭಾವವನ್ನು ತೆಗೆದುಕೊಳ್ಳಲಾಗಿದೆ.